**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಾಲೂರು.</u>**

ದಿನಾಂಕ 28 ನೇ ಜನವರಿ-2025

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 481/2024</u>**

<u>ಫಿರ್ಯಾದುದಾರರುಃ</u> ಸರ್ಕಾರದ ಪರಃ ಮಾಸ್ತಿ ಆರಕ್ಷಕರು,

ವಿರುದ್ಧ

<u>ಆರೋಪಿಃ</u>

1. ಗುರುಮೂರ್ತಿ, 35 ವರ್ಷ,
ಬಿನ್ ಗಂಗಪ್ಪ,

2. ಮಾರಮ್ಮ, 30 ವರ್ಷ,
ಕೋಂ.ಗುರುಮೂರ್ತಿ,

ಇಬ್ಬರೂ ವಾಸಃ ನಲ್ಲತಿಮ್ಮನಹಳ್ಳಿ ಗ್ರಾಮ,
ಮಾಸ್ತಿ ಹೋಬಳಿ, ಮಾಲೂರು ತಾಲ್ಲೂಕು.

<u>ಸ್ವಂತ ಸ್ಥಳಃ</u> ದೊಡ್ಡೂರು ಗ್ರಾಮ,
ಮಾರಾಂಡಪಲ್ಲಿ ಅಂಚೆ, ಸೂಳಗಿರಿ ತಾಲ್ಲೂಕು,
ಕೃಷ್ಣಗಿರಿ, ತಮಿಳುನಾಡು.

## -ಃ <u>ದೋಷಾರೋಪಣೆ</u> ಃ-

ಶ್ರೀಮತಿ. ಹೆಚ್.ಜೆ.ಶಿಲ್ಪ ಎಂ.ಎ. ಎಲ್.ಎಲ್.ಎಂ. 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಮಾಲೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದಿನಾಂಕ 01-01-2024 ರಂದು ಸಂಜೆ 7-30 ಗಂಟೆ ಸಮಯದಲ್ಲಿ ಮಾಸ್ತಿ ಠಾಣಾ ಸರಹದ್ದು, ನಲ್ಲತಿಮ್ಮನಹಳ್ಳಿ ಗ್ರಾಮದಲ್ಲಿ ಚಾಸಾ-1 ರವರು 1 ನೇ ಆರೋಪಿತರಾದ ನಿಮ್ಮನ್ನು ಕುರಿತು ಏಕೆ ನನ್ನ ಭಾಗಕ್ಕೆ ನೀಡಿರುವ ಜಮೀನನ್ನು ಉಳುಮೆ ಮಾಡುತ್ತಿದ್ದೀಯಾ ಎಂದು ಕೇಳಿದ್ದಕ್ಕೆ, ಆರೋಪಿತರಾದ

ನೀವು ಸಮಾನ ಉದ್ದೇಶದಿಂದ ಚಾಸಾ-1 ರವರನ್ನು ಕುರಿತು ನೀನು ಯಾರು ಕೇಳುವುದಕ್ಕೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದನೆ ಮಾಡಿರುವ ಕಾರಣ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಡನೆ ವಿನಾಃಕಾರಣ ಜಗಳ ತೆಗೆದಿದ್ದಲ್ಲದೆ, 1 ನೇ ಆರೋಪಿಯಾದ ನೀವು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಮುಖಕ್ಕೆ ಹೊಡೆದು ಸಾಧಾರಣ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, 2 ನೇ ಆರೋಪಿತರಾದ ನೀವು ದೊಣ್ಣೆಯಿಂದ ಚಾಸಾ-1 ರವರ ಮೈಮೇಲೆ ಹೊಡೆದು ಸಾದಾರಣ ಸ್ವರೂಪದ ಗಾಯಗಳನ್ನುಂಟು ಮಾಡಿರುವ ಕಾರಣ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಡನೆ ಜಗಳ ತೆಗೆದಿದ್ದಲ್ಲದೆ, ಈ ಜಮೀನಿನ ತಂಟೆಗೆ ಬಂದರೆ ಪ್ರಾಣ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುವ ಕಾರಣ ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಆಪಾದನೆಯನ್ನು ಮಾಡಿರುವುದರಿಂದ ನಾನು ಈ ಮೇಲಿನ ಆಪಾದನೆಯನ್ನು ನೀವು ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ದಿನಾಂಕಃ 28-01-2025
ಸ್ಥಳಃ ಮಾಲೂರು

Sd/-

**(ಹೆಚ್.ಜೆ.ಶಿಲ್ಪ)**

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಮಾಲೂರು.